Advertorial

# ಕಂಪ್ಯೂಟರ್ ನೆರವಿನೊಂದಿಗೆ ಮಂಡಿಯ ಬದಲಾವಣೆ:

## ಬೆಂಗಳೂರಿನಲ್ಲಿ ವಿಕ್ರಂ ಆಸ್ಪತ್ರೆಯ ಸುಪ್ರಸಿದ್ಧರಾದ ಆರ್ಥೋಪಿಡಿಕ್ ಸರ್ಜನ್‌ರವರು ಕಂಪ್ಯೂಟರ್ ನೆರವಿನೊಂದಿಗೆ ಮಂಡಿಯ ಬದಲಾವಣೆ ಮಾಡುವ ತಂತ್ರಜ್ಞಾನದ ಬಗ್ಗೆ ವಿವರಿಸುತ್ತಾರೆ.

### ಸಂಧಿವಾತವೆಂದರೇನು?

ಸಂಧಿವಾತವೆಂದರೆ ಕೀಲುಗಳ ಸವೆಯುವಿಕೆ ಎಂದಾಗಿದೆ. ಎಂದರೆ ಕೀಲನ್ನು ಕೂಡಿಸುವ ಮೂಳೆಗಳ ಅಕ್ಕಪಕ್ಕದ ಮೇಲ್ಮೈಗಳು ಸವೆಯುತ್ತವೆ. ಇದು ದೇಹದಲ್ಲಿನ ಯಾವುದೇ ಕೀಲಿಗೆ ಪರಿಣಾಮ ಬೀರಬಹುದು ಹಾಗೂ ಬೆನ್ನೆಲುಬೂ ಸೇರಿದಂತೆ ಮಂಡಿ, ಸೊಂಟ, ಭುಜ ಮತ್ತು ಬೆರಳುಗಳ ಕೀಲುಗಳಲ್ಲಿ ಸರ್ವೆಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಮಂಡಿ ಸಂಧಿವಾತವು ಅತ್ಯಂತ ದುರ್ಬಲಗೊಳಿಸುವ ಸಮಸ್ಯೆ-ಯಾಗಿದ್ದು ಗುಣಮಟ್ಟದ ಜೀವನ ನಡೆಸಲು ಧಕ್ಕೆ ತರುತ್ತದೆ.

### ಮಂಡಿ ಸಂಧಿವಾತ ರೋಗ ಲಕ್ಷಣಗಳೇನು? ನಾನು ಕೂಡ ಅದರಿಂದ ಬಳಲಬಹುದಾದ ಸಂಭವವಿರುತ್ತದೆಯೆ?

ಅತ್ಯಂತ ಸಾಮಾನ್ಯವಾಗಿ ಉಂಟಾಗುವ ಸಮಸ್ಯೆ ನಿರ್ದಿಷ್ಟವಾಗಿ ಕೀಲುಗಳ ಸುತ್ತಲಿನ ನೋವಾಗಿರುತ್ತದೆ. ಇದು ಊತ, ಮಂಡಿ ಚಲನೆಯಲ್ಲಿ ಚಟಪಟ ಶಬ್ದ, ಚಲನೆಯಲ್ಲಿ ತೊಡಕು ಎಂದರೆ ನಡೆಯಲು ಹಾಗೂ ಮೆಟ್ಟಿಲು ಹತ್ತಲು ಕೂಡ ಕಷ್ಟ ಉಂಟು-ಮಾಡುತ್ತದೆ.

### ನಾನು ಮಂಡಿ ಸಂಧಿವಾತ ಸಮಸ್ಯೆಗೆ ಈಡಾದರೆ ಚಿಕಿತ್ಸೆಯ ಆಯ್ಕೆಗಳೇನು?

ಕೆಲವು ಜೀವನಶೈಲಿ ಬದಲಾವಣೆ, ಸೂಕ್ತ ವ್ಯಾಯಾಮ ಮಾಡುವಿಕೆ ಹಾಗೂ ಕೆಲವು ಔಷಧಿಗಳು, ಪೌಷ್ಠಿಕಾಂಶಗಳ ವಿವೇಚನಯುತ ಉಪಯೋಗ ಹಾಗೂ ಫಿಜಿಯೋಥೆರೆಪಿ ಮೂಲಕ ಸಂಧಿವಾತವಿದ್ದರೂ ಅತ್ಯಂತ ಕ್ರಿಯಾಶೀಲ ಜೀವನ ನಡೆಸಬಹುದು. ಸ್ವಲ್ಪ ಪ್ರಮಾಣದ ಮತ್ತು ಸಾಧಾರಣ ಸಂಧಿವಾತಗಳಿಗೆ ಚಿಕಿತ್ಸೆ ಆಯ್ಕೆಗಳು ಎಂದರೆ ಬಾಹ್ಯ ಬೆಂಬಲಗಳು, ಪಿಜಿಯಥೆರಫಿ, ವ್ಯಾಯಾಮಗಳು ಮತ್ತು ಆರ್ಥೋಸ್ಕೋಪಿಕ್ ಡಿಬ್ರಾಯ್‌ಮೆಂಟ್ **(ಕೀ ಹೋಲ್ ಪ್ರಕ್ರಿಯೆಗಳು)** ಅತ್ಯಂತ ಉಪಯುಕ್ತವಾಗಿರುತ್ತವೆ. ಆದಾಗ್ಯು ಕೀಲು ಬದಲಾವಣೆಯು ರೋಗ ಉಪಶಮನಕ್ಕೆ ಅತ್ಯಂತ ಪರಿಣಾಮಕಾರಿ ವಿಧಾನವಾಗಿದ್ದು ಹೆಚ್ಚಿನ ಹಂತದ ಸಂಧಿವಾತಗಳಿಂದ ಬಳಲುತ್ತಿರುವ ವ್ಯಕ್ತಿಯ ಕಾರ್ಯ ಚಟು-ವಟಿಕೆಗಳನ್ನು ಸುಧಾರಿಸಲು ಅತ್ಯಂತ ಸಹಕಾರಿಯಾಗಿರುತ್ತದೆ.

### ಕೀಲು ಬದಲಾವಣೆ ಎಂದರೇನು?

ಕೀಲು ಬದಲಾವಣೆ ಅಥವಾ ಟಿಕೆಆರ್ ಪ್ರಮುಖವಾಗಿ ಮಿಶ್ರಲೋಹ ಮತ್ತು ಪಾಲಿಯೆತಿಲಿನ್ ಒಳಗೊಂಡ ಕೃತಕ ಸಾಮಗ್ರಿಯೊಂದಿಗೆ ತೊಡೆಯೆಲುಬು, ಮೊಣಕಾಲು ಮೂಳೆ ಮತ್ತು ಮಂಡಿಚಿಪ್ಪಿನ (ಮಂಡಿ ಕೀಲು ರೂಪಿಸುವ ಮೂಳೆಗಳು) ಸವೆದ ಮೇಲ್ಮೈಗಳನ್ನು ಸರಿಪಡಿಸುವಿಕೆ ಒಳಗೊಂಡಿರುತ್ತದೆ. ಕೆಲವು ದಶಕಗಳಿಂದ ಸಾಂಪ್ರದಾಯಕ ಟಿಕೆಆರ್ ಇದ್ದು, ಆದಾಗ್ಯೂ ಕಳೆದ ಕೆಲವು ವರ್ಷಗಳಿಂದೀಚೇಗೆ ಟಿಕೆಆರ್ ಕಾರ್ಯರೂಪಕ್ಕೆ ಕಂಪ್ಯೂಟರ್ ನೆರವು ಮತ್ತಷ್ಟು ನಿಖರವಾದ ಹಾಗೂ ಹೊಸದಾದ ತಂತ್ರಜ್ಞಾನವಾಗಿದೆ.

### ಕಂಪ್ಯೂಟರ್ ನೆರವಿನೊಂದಿಗಿನ ಟಿಕೆಆರ್ ಪ್ರಯೋಜನಗಳೇನು?

ಕಂಪ್ಯೂಟರ್ ನೆರವಿನೊಂದಿಗಿನ ಟಿಕೆಆರ್ ಈ ಕೆಳಗೆ ತಿಳಿಸಿರುವ ಪ್ರಯೋಜನಗಳನ್ನು ಹೊಂದಿರುತ್ತದೆ.

1) ಜೋಡಣೆಯ ಹೆಚ್ಚಿನ ನಿಖರತೆ. ಇದರಿಂದ ನೆಲೆಗೊಳಿಸಿದ ಸಾಮಗ್ರಿಯ ದೀರ್ಘಕಾಲ ಸರಿಯಾಗಿರುತ್ತದೆ.
2) ಮಂಡಿಯ ಉತ್ತಮ ಸಮತೋಲನ
3) ರಕ್ತ ನಷ್ಟದ ಇಳಿಕೆ ಕಾರಣ ರಕ್ತದಾನ ಪಡೆಯುವಿಕೆ ಅಗತ್ಯ ಕಡಿಮೆಯಾಗಿರುತ್ತದೆ ಹಾಗೂ ಹೃದ್ರೋಗದ ಅಪಾಯ ಕಡಿಮೆಯಾಗಿರುತ್ತದೆ.
4) ರಕ್ತ ಹೆಪ್ಪುಗಟ್ಟುವ ಸಾಧ್ಯತೆಗಳ ಇಳಿಕೆ (ಶ್ವಾಸಕೋಶ ಮತ್ತು ಮೆದುಳಿನ ಸಮಸ್ಯೆಗಳ ಇಳಿಕೆ)

ಈ ಪ್ರಯೋಜನಗಳು ಮತ್ತು ಉತ್ತಮನೋವು ವ್ಯವಸ್ಥಾಪನಾ ತಂಡದ ನೆರವು, ಪರಿಣಾಮಕಾರಿ ಫಿಜಿಯೋಥೆರಪಿ ತಂಡದ ಸಹಕಾರದ ಮೂಲಕ ರೋಗಿಯು ಅತ್ಯಂತ ಶೀಘ್ರವಾಗಿ ತನ್ನ ಸಾಮಾನ್ಯ ಜೀವನಕ್ಕೆ ಮರಳಬಹುದು.

### ಈ ಪ್ರಕ್ರಿಯೆಯಿಂದ ಯಾವುದೇ ಅಡ್ಡ ಪರಿಣಾಮವಾಗು ತ್ತದೆಯೆ?

ಟಿಕೆಆರ್‌ನಲ್ಲಿ ಕಂಪ್ಯೂಟರ್ ನೆರವಿನ ಉಪಯೋಗವು ಟಿಕೆಆರ್ ಸಂಬಂಧಿತವಾದ ಅಪಾಯಗಳನ್ನು ಕಡಿಮೆ ಮಾಡುತ್ತದೆ ಆದರೆ ಅದು ತನ್ನದೆ 2 ಅಪ್ರಯೋಜನಕಾರಿ ಅಂಶಗಳನ್ನು ಹೊಂದಿರುತ್ತದೆ ಎಂದರೆ:

1) ಸಾಂಪ್ರದಾಯಕ ಟಿಕೆಆರ್‌ಗೆ ಹೋಲಿಸಿದರೆ ಹೆಚ್ಚಿನ ಶಸ್ತ್ರಚಿಕಿತ್ಸೆ ಸಮಯ ತೆಗೆದುಕೊಳ್ಳುತ್ತದೆ. ಆದರೂ, ತರಬೇತಿ ಹೊಂದಿದವರು ಹಾಗೂ ನೇವಿಗೇಟೆಡ್ ಟಿಕೆಆರ್ ಅನ್ನು ಎಂದಿನಂತೆ ಮಾಡುವ ಕೇಂದ್ರಗಳಲ್ಲಿ ವ್ಯತ್ಯಾಸವು ಅತ್ಯಂತ ಕಡಿಮೆಯಾಗಿರುತ್ತದೆ.
2) ಸಾಂಪ್ರದಾಯಕ ಟಿಕೆಆರ್‌ಗೆ ಹೋಲಿಸಿದರೆ ವೆಚ್ಚವು ಸ್ವಲ್ಪ ಹೆಚ್ಚಾಗುತ್ತದೆ.

### ವೈದ್ಯರನ್ನು ಕೇಳಿರಿ



**ಡಾ. ಚೇತನ್ ನಾಗರಾಜ್**
ಎಂಎಸ್, ಡಿಎನ್‌ಬಿ, ಎಫ್‌ಐಎಎ (ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್)
ಕನ್ಸಲ್ಟೆಂಟ್ ಆರ್ಥೋಪಿಡಿಕ್ ಸರ್ಜನ್
ಮಂಡಿ ಮತ್ತು ಭುಜ ಶಸ್ತ್ರಚಿಕಿತ್ಸೆ ತಜ್ಞರು

ಸಾಂಪ್ರದಾಯಕ ಟಿಕೆಆರ್‌ಗೆ ಒಳ ಗೊಂಡಿರುವ ಅಪಾಯಕಾರಿ ಅಂಶಗಳು ಕಂಪ್ಯೂಟರ್ ನೆರವಿಗೂ ಕೂಡ ಅನ್ವಯಿಸುತ್ತವೆ.

ಸಾಂಪ್ರದಾಯಕ ಟಿಕೆಆರ್‌ಗೆ ಹೋಲಿಸಿದರೆ ಹೃದ್ರೋಗ ಮತ್ತು ಇತರ ಅಪಾಯಗಳನ್ನು ತಗ್ಗಿಸುತ್ತದೆ.

### ವಿಕ್ರಂ ಆಸ್ಪತ್ರೆ, ಬೆಂಗಳೂರು
### ಟೀಮ್ ಆರ್ಥೋಪಿಡಿಕ್ಸ್

**ಡಾ. ಚಂದ್ರ ಮೌಳಿ ಬಿ.**
ಎಂಬಿಬಿಎಸ್ ಎಂಎಸ್ ಆರ್ಥೋಪಿಡಿಕ್ಸ್
ಕನ್ಸಲ್ಟೆಂಟ್ - ಆರ್ಥೋಪಿಡಿಕ್ ಸರ್ಜನ್

**ಡಾ. ಚೇತನ್ ನಾಗರಾಜ್**
ಎಂಎಸ್, ಡಿಎನ್‌ಬಿ, ಎಫ್‌ಐಎಎ (ಆಸ್ಟ್ರೇಲಿಯ, ನ್ಯೂಜಿಲ್ಯಾಂಡ್),
ಕನ್ಸಲ್ಟೆಂಟ್ - ಆರ್ಥೋಪಿಡಿಕ್ ಸರ್ಜನ್
ಮಂಡಿ ಮತ್ತು ಭುಜ ಶಸ್ತ್ರಚಿಕಿತ್ಸೆ ತಜ್ಞರು

**ಡಾ. ಬೋಪಣ್ಣ ಐ.ಸಿ**
ಎಂಬಿಬಿಎಸ್ ಎಂಎಸ್ ಆರ್ಥೋಪಿಡಿಕ್ಸ್
ಕನ್ಸಲ್ಟೆಂಟ್ - ಆರ್ಥೋಪಿಡಿಕ್ ಸರ್ಜನ್

**ಬೆಂಗಳೂರಿನಲ್ಲಿರುವ ವಿಕ್ರಂ ಆಸ್ಪತ್ರೆಯ ವೈದ್ಯರಿಂದ ಪ್ರಕಟಿಸಲಾಗುವ ನಿಮ್ಮ ಅಚ್ಚುಮೆಚ್ಚಿನ ಮ್ಯಾಗಜೈನ್‌ನ ಮಾಸಿಕ ಕಾಲಂನಲ್ಲಿ ವೀಕ್ಷಿಸಿ. ನೀವು ಯಾವುದೇ ಪ್ರಶ್ನೆ ಹೊಂದಿದ್ದಲ್ಲಿ ನಿಮ್ಮ ಪ್ರಶ್ನೆಗಳನ್ನು ಡಾ. ಚೇತನ್ ನಾಗರಾಜ್, C/o. ಡಾ.ಮಿನರ್ವ, ವಿಕ್ರಂ ಆಸ್ಪತ್ರೆ, ಬೆಂಗಳೂರು, ನಂ. 71/1, ಮಿಲ್ಲರ್ಸ್ ರಸ್ತೆ, ಬೆಂಗಳೂರು-560 052, ಇವರಿಗೆ ಕಳುಹಿಸಬಹುದು.**

**ನಂ.71/1, ಮಿಲ್ಲರ್ಸ್ ರಸ್ತೆ, ಸೇಂಟ್ ಆ್ಯನ್ಸ್ ಕಾಲೇಜು ಎದುರು,
ಬೆಂಗಳೂರು-560 052.
ಫೋನ್: +91 80 7100 4500
www.vikramhospital.com**

VIKRAM HOSPITAL Bengaluru